ಬುಧವಾರ
14/05/2025
ಸ್ನೇಹಯಾನ



ಡಾ.ಚಂದ್ರಶೇಖರ ದಾಮ್ಲೆ

WWW.THERURALMIRROR.COM
ದ ರೂರಲ್ ಮಿರರ್.ಕಾಂ
Constructive Media

# ಸಂತೆಯಲ್ಲಿ ಸಾಗುತ್ತಿರುವ ನಾವು

ಭಾರೀ ದೊಡ್ಡ ಜಾತ್ರೆ. ಅಲ್ಲಿ ವಿಸ್ತಾರವಾದ ವೈವಿಧ್ಯಮಯ ವಸ್ತುಗಳ ಮಾರಾಟದ ಸಂತೆ ಹರಡಿಕೊಂಡಿರುತ್ತದೆ. ದೂರಕ್ಕೆ ನೋಡಿದಷ್ಟೂ ಕಾಣುವುದೇ ಜನಜಂಗುಳಿ. ಎಲ್ಲರೂ ಸುಖಾಪೇಕ್ಷಿಗಳಾಗಿಯೇ ಬಂದವರು. ಕೆಲವರಿಗೆ ನೋಡುವ ಸುಖ, ಕೆಲವರಿಗೆ ಲಾಭ ಮಾಡುವ ಸುಖ, ಇನ್ನು ಕೆಲವರಿಗೆ ಅಪರೂಪದ ವಸ್ತುಗಳನ್ನು ಖರೀದಿಸುವ ಸುಖ. ಹೀಗೆ ಎಲ್ಲರೂ ವ್ಯಾಪಾರದಲ್ಲಿ ತೊಡಗಿದ್ದಾರೆ. ಎಲ್ಲಿ ಖರೀದಿಸುವುದು? ಏನನ್ನು ಖರೀದಿಸುವುದು? ಇದು ತನಗೆ ಬೇಕಾ? ಈಗ ಕೊಳ್ಳದಿದ್ದರೆ ಮತ್ತೆ ಸಿಗದೇ ಹೋದೀತೇ? ಈಗ ಕೊಂಡರೆ ಹೊತ್ತುಕೊಂಡು ತಿರುಗುವುದು ಹೇಗೆ? ಜಾತ್ರೆಯಲ್ಲಿ ಇನ್ನೂ ತಿರುಗಿ ನೋಡಬೇಕಾದ್ದು ಬಹಳ ಇದೆ. ಮುಂದೆ ಕಡಿಮೆ ಬೆಲೆಗೆ ಸಿಗಲೂಬಹುದು. ಜಾತ್ರೆಯನ್ನು ಸಂಪೂರ್ಣವಾಗಿ ಕಾಣಲು ಹಣವನ್ನು ಉಳಿಸಿಕೊಳ್ಳಬೇಕು. ಕಡಿಮೆ ಖರ್ಚಿನಲ್ಲಿ ಹೆಚ್ಚು ಖರೀದಿಸಬೇಕು. ಹಾಗಾಗಿ ಈಗಲೇ ಹಣವನ್ನು ಮುಗಿಸುವುದು ಸರಿಯಲ್ಲ. ಕಿಸೆಯಲ್ಲಿರುವ ಪರ್ಸನ್ನು ಮುಟ್ಟಿನೋಡುತ್ತಲೇ ಮುಂದಿನ ಖರೀದಿಯ ಮೇಲೆ ಕಣ್ಣು ಹಾಯಿಸುತ್ತಲೇ ಜನರೆಡೆಯಲ್ಲಿ ಜಾಗ ಮಾಡಿಕೊಳ್ಳುತ್ತ, ಎಡವುತ್ತ, ತಳ್ಳುತ್ತ, ಅಲ್ಲೇನಿದೆ, ಇಲ್ಲೇನಿದೆ, ಎಷ್ಟಕ್ಕೆ ಸಿಗುತ್ತದೆ ಎಂದು ವಿಚಾರಿಸುತ್ತ ಸಾಗುವ ವ್ಯಕ್ತಿಗೆ ಸುಸ್ತಾಗಿ ಇನ್ನು ಹೊರಗೆ ಕಾಲಿಡುವಾಗ ತೃಪ್ತಿ ಇರುವುದಿಲ್ಲ. ಬಳಲಿಕೆ ಮಾತ್ರ ಇರುತ್ತದೆ. ಆದರೆ ಅಷ್ಟರಲ್ಲಿ ಸಮಯ ಕಳೆದಿರುತ್ತದೆ.

ತನ್ನ ಸುತ್ತಾಟದ ಆರಂಭದಲ್ಲಿ ಖರೀದಿಸಬೇಕೆಂದು ಬಯಸಿದ ವಸ್ತುಗಳು ಇನ್ನೂ ಅಲ್ಲೇ ಉಳಿದಿವೆಯೇ ಎಂದು ನೋಡಲು ಹೋಗುತ್ತಾನೆ. ಆದರೆ ಅಷ್ಟರಲ್ಲಿ ಸಂತೆಯ ರೂಪವೇ ಬದಲಾಗಿರುತ್ತದೆ. ಅಲ್ಲಿ ಹೊಸ ಹೊಸ ವಸ್ತುಗಳು ಬಂದು ಸೇರಿರುತ್ತವೆ. ಗುಣಮಟ್ಟ ಕಡಿಮೆಯಾಗಿದ್ದರೂ ಅವುಗಳ ಬೆಲೆ ಹೆಚ್ಚಾಗಿರುತ್ತದೆ. ಗಿರಾಕಿಗಳಲ್ಲಿ ಹೊಸ ಸ್ಪರ್ಧೆಯೂ ಇರುತ್ತದೆ. ವಸ್ತುಗಳ ಆಕರ್ಷಣೆಯ ಕಾರಣಗಳು ಬದಲಾಗಿರುತ್ತವೆ. ಅಂದರೆ ಜಗತ್ತಿನ ಇಂದಿನ ವಿದ್ಯಮಾನಗಳ ವೇಗದಲ್ಲಿ ವಸ್ತುಗಳ ಮತ್ತು ಸೇವೆಗಳ ಆಯ್ಕೆಗಳೂ ಬೆಲೆಗಳು ಏರುತ್ತವೆ. ಈ ಏರಿಕೆಯು ಗಿರಾಕಿಗಳ ಪ್ರತಿಷ್ಠೆಯೊಂದಿಗೆ ಹೊಂದಿಕೊಳ್ಳುವುದರಿಂದ ಜಾತ್ರೆಯ ಮೌಲ್ಯಗಳೂ, ನೀತಿಗಳೂ, ಉದ್ದೇಶಗಳೂ ಹೊಸ ದೃಷ್ಟಿಯನ್ನು ಪಡೆಯುತ್ತವೆ. ಈಗ ದೃಷ್ಟಿ ಇದ್ದಂತೆ ಮನಸ್ಸು ರೂಪುಗೊಳ್ಳುತ್ತದೆ, ಮನಸ್ಸಿನಂತೆ ಭಾವ, ಭಾವದಂತೆ ಯತ್ನ ಹಾಗೂ ಯತ್ನದ ಪ್ರಕಾರ ಫಲ ಇರುತ್ತದೆ.

ಯಥಾ ದೃಷ್ಟಿಃ ತಥಾ ಮನಃ| ಯಥಾ ಮನಃ ತಥಾ ಭಾವಃ||
ಯಥಾ ಭಾವಃ ತಥಾ ಯತ್ನಃ| ಯಥಾ ಯತ್ನಃ ತಥಾ ಫಲಃ||

ಅರ್ಥಾತ್ ಇಂದಿನ ಜನರ ಪ್ರಯತ್ನಗಳು ಅವರ ದೃಷ್ಟಿ ಮತ್ತು ಭಾವಗಳಿಂದ ನಿರ್ದೇಶಿತವಾಗಿರುತ್ತವೆ. ಅದರಂತೆ ಫಲಗಳೂ ಲಭಿಸುತ್ತವೆ. ಇಂದಿನ ಜೀವನದ ಪರಿಸರವು ಜಾತ್ರೆಯ ಪರಿಸರದಂತಾಗಿದೆ. ಇಲ್ಲಿ ಸ್ಥಿರತೆಗಿಂತ ಅಸ್ಥಿರತೆಯೇ ಹೆಚ್ಚಾಗಿದೆ.



ಯಾರು ಯಾವಾಗ ಜಾರಬಹುದು, ಬೀಳಬಹುದು ಮತ್ತು ಮುಳುಗಬಹುದು ಎಂಬುದನ್ನು ಹೇಳಲು ಸಾಧ್ಯವಿಲ್ಲ.

ಇಂದಿನ ಜಗತ್ತಿನಲ್ಲಿ ನಿರ್ದಿಷ್ಟ ಜೀವನ ದೃಷ್ಟಿಯನ್ನು ಹೊಂದಿರಲು ಸಾಧ್ಯವಿಲ್ಲ. ಅದು ಆಗಾಗ ಬದಲಾಗುವ ಸಾಧ್ಯತೆ ಇರುತ್ತದೆ. ಏಕೆಂದರೆ ಸಂತೃಪ್ತಿಯ ಹೊಸ ನೆಲೆಗಳು ಕಾಣಸಿಗುತ್ತವೆ. ಹಾಗಾಗಿ ನಮ್ಮ ಸಾಮಾಜಿಕ ಜೀವನವು ಜಾತ್ರೆಯೊಳಗಿನ ಸೆಳೆತ ಮತ್ತು ತಳ್ಳುವಿಕೆಯ ಪರಿಸ್ಥಿತಿಗೆ ಒಳಗಾದಂತಿದೆ. ಹಣ ಗಳಿಸುವ ಗುರಿಯತ್ತ ಎಲ್ಲರ ಚಿತ್ತ ನೆಟ್ಟಿದೆ. ಇತ್ತೀಚೆಗೆ ಒಬ್ಬರು ತನ್ನ ಮಗನಿಗೆ ವರ್ಷಕ್ಕೆ ಎರಡು ಕೋಟಿ ರೂಪಾಯಿ ಸಂಬಳ, ದೊಡ್ಡ ಮನೆ ಮತ್ತು ಐಷಾರಾಮಿ ಕಾರು ಸಿಕ್ಕಿದೆ ಎಂದರು. ಅದನ್ನು ಕೇಳಿದಾಗ ಅಲ್ಲಿದ್ದ ಯುವಜನರಿಗೆ "ತಮಗೂ ಇಂಥದ್ದೇ ಆದಾಯ ಬೇಕು" ಎಂತ ಅನಿಸಿದರೆ ಆಶ್ಚರ್ಯವಿಲ್ಲ. ಅದಕ್ಕಾಗಿ ಏನು ಮಾಡಬೇಕು? ಯಾವ ಶಿಕ್ಷಣ ಪಡೆಯಬೇಕು ಎಂಬ ಕಡೆಗೇ ಅವರ ಚಿತ್ತ. ಆದರೆ ಅಷ್ಟೊಂದು ದುಡ್ಡು ದುಡಿಯುವವನಿಗೆ ತನ್ನ ಹೆಂಡತಿ ಮಕ್ಕಳತ್ತ ಮತ್ತು ಹೆತ್ತವರ ನೆಮ್ಮದಿಯತ್ತ ಚಿತ್ತ ಹರಿಸಲು ಸಮಯವಿಲ್ಲ ಎಂಬ ಸತ್ಯದ ಬಗ್ಗೆ ಯಾರೂ ಯೋಚಿಸುವುದಿಲ್ಲ. ಆಸೆಗಳು ಹಣದ ಮೊತ್ತದತ್ತ ಚಿತ್ತವನ್ನು ಸೆಳೆಯುತ್ತವೆ. ಆಸೆ ಹೊತ್ತ ಮಕ್ಕಳು ಎತ್ತೆತ್ತಲೋ ಸಾಗುತ್ತಾರೆ. ಹೆತ್ತವರು ನೆಮ್ಮದಿಯ ಹುಡುಕಾಟ ನಡೆಸುತ್ತಾರೆ.

ಕೃಷಿತೋ ನಾಸ್ತಿ ದುರ್ಭಿಕ್ಷಂ ಎಂದರೆ ಕೃಷಿಯಲ್ಲಿ ತೊಡಗಿದವನಿಗೆ ಅನ್ನ ಇಲ್ಲ ಎಂತಾಗುವುದಿಲ್ಲ ಎಂಬುದೇ ತಾತ್ಪರ್ಯ. ಆದರೆ ಇಂದು ಜನ ಕೃಷಿಯನ್ನು ಬಿಡುತ್ತಿದ್ದಾರೆ. ಏಕೆಂದರೆ ಕೃಷಿಯು ಕೋಟ್ಯಾಂತರ ರೂಪಾಯಿ ಹಣ ಗಳಿಸುವ ದಾರಿಯಲ್ಲ. ಇಂದಿನ ಯುವಜನರ ಆಸಕ್ತಿ "ಅನ್ನವನ್ನು ಬೆಳೆಸುವ ಅಲ್ಲ, ಅನ್ನವನ್ನು ಖರೀದಿಸುವ" ಸಾಮರ್ಥ್ಯವನ್ನು ಗಳಿಸಬೇಕು ಎಂಬುದಾಗಿದೆ. ಆಗ ನಾವು ಅನ್ನವನ್ನಷ್ಟೇ ಅಲ್ಲ, ಬೇರೆ ಅನೇಕ ಸುಖಭೋಗಗಳನ್ನು ಗಳಿಸಲು ಸಾಧ್ಯ ಎಂಬುದು ಅವರ ನಂಬಿಕೆಯಾಗಿದೆ. ಅದಕ್ಕಾಗಿ ಜಾತ್ರೆಯಲ್ಲಿ ಕಡಿಮೆ ಬೆಲೆಗೆ ನಮಗೆ ಬೇಕಾದ ವಸ್ತುವನ್ನು ಹುಡುಕುವಂತೆ ಯಾವ ಶಿಕ್ಷಣವು ಎಲ್ಲಿ ಕಡಿಮೆಗೆ ಸಿಗುತ್ತದೆಂದು ಹುಡುಕುವತ್ತ ನಮ್ಮನ್ನು ತಳ್ಳಿಸಿಕೊಳ್ಳುತ್ತೇವೆ. ಈ ತಳ್ಳಾಟದಲ್ಲಿ ಎಲ್ಲಿಗೋ ಒಂದು ಕಡೆಗೆ ತಳ್ಳಲ್ಪಡುತ್ತೇವೆ. ನಮಗೆ ಸಿಕ್ಕಿದ್ದನ್ನು ಪಡೆಯುತ್ತೇವೆ. ಮತ್ತೆ ಸಿಕ್ಕಿದ ಉದ್ಯೋಗಾವಕಾಶದಲ್ಲಿ ನೆಲೆಗೊಳ್ಳುತ್ತೇವೆ. ಆಗ ಕಳೆದುಹೋದ ಸಾಧ್ಯತೆಗಳು ಕಾಣತೊಡಗುತ್ತವೆ, ಮತ್ತು ಅವು ನಮ್ಮ ನೆಮ್ಮದಿಯನ್ನು ಕೆಡಿಸುತ್ತವೆ. ಉದ್ಯೋಗ ಜಾತ್ರೆಯಲ್ಲಿ ತಳ್ಳಲ್ಪಡದಿರುತ್ತಿದ್ದರೆ ಇನ್ನೂ ಉತ್ತಮ ಅವಕಾಶವ ಪಡೆಯಬಹುದಿತ್ತು ಎಂಬ ಕೊರತೆಯ ಭಾವ ಆವರಿಸುತ್ತದೆ.

ಇಂದಿನ ಔದ್ಯಮಿಕ ಜಗತ್ತಿನಲ್ಲಿ "ಸುಸ್ಥಿರತೆ" (Sustainability)ಯ ಅವಶ್ಯಕತೆಯು ಮತ್ತೆ ಮತ್ತೆ ಪ್ರತಿಪಾದಿಸಲ್ಪಡುತ್ತದೆ. ಯಾವುದೇ ಹೊಸ ಸಂಶೋಧನೆಯ ಯೋಜನೆಗಳ ಮೌಲ್ಯಮಾಪನದಲ್ಲಿ ಸುಸ್ಥಿರತೆಯ ಪ್ರಶ್ನೆಯೇ ಹೆಚ್ಚು ಮುಖ್ಯವಾಗುತ್ತದೆ. ಕಳೆದ ಎರಡು ಮೂರು ದಶಕಗಳಲ್ಲಿ ಭತ್ತದ ಬೇಸಾಯವು ಕರಾವಳಿಯಲ್ಲಿ ಕಡಿಮೆಯಾಗುತ್ತ ಬಂದಿದೆ. ಇನ್ನು ಮಲೆನಾಡಿನಲ್ಲಿ ಹಿಂದಿನ ಭತ್ತದ ಗದ್ದೆಗಳು ಆರ್ಥಿಕವಾಗಿ ಲಾಭದಾಯಕವಲ್ಲವೆಂದು ಅಡಿಕೆ ತೋಟಗಳಾಗಿ ಪರಿವರ್ತನೆಗೊಂಡಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಮರಗಳಿಗೆ ಹಳದಿ ರೋಗ ಬಂದು ಅಡಿಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಪರ್ಯಾಯವಾಗಿ ರಬ್ಬರ್ ಬೆಳೆಸಿದವರು ಜೀವನ ನಿರ್ವಹಣೆಯ ಸವಾಲನ್ನು ಗೆದ್ದಿದ್ದಾರೆ.

**ಸಂಪೂರ್ಣ ಓದಿಗೆ....**
**www.theruralmirror.com ಕ್ಲಿಕ್ ಮಾಡಿರಿ ಅಥವಾ ಇಲ್ಲಿ Scan ಮಾಡಿರಿ**

ನಮ್ಮ ಚಾನೆಲ್ ಫಾಲೋ ಮಾಡಲು